೪. ಮಂಜೂರುದಾರರು ಅವರಿಗೆ ಮಂಜೂರು ಮಾಡಿರುವ ಜಮೀನನ್ನು ನಿಗಧಿತ ವೇಳೆಯಲ್ಲಿ ಅಥವಾ ವಿಸ್ತಾರಿತ ವೇಳೆಯಲ್ಲಿ ಮಂಡಲಿಗೆ ಸಮಂಜಸವಾಗುವಂತೆ ಉಪಯೋಗಿಸಲು ತಪ್ಪಿದ್ದಲ್ಲಿ ಅಂತಹ ಅನುಪಯುಕ್ತ ಭಾಗದ ಜಮೀನನ್ನು ಪುನಃ ವಶಕ್ಕೆ ಪಡೆಯಲು ಮಂಡಲಿಯು ಹಕ್ಕು ಪಡೆದಿರುತ್ತದೆ.

೫. ೧೧ ವರ್ಷಗಳ ನಂತರ ಮಂಜೂರುದಾರರು ಗುತ್ತಿಗೆ ಮತ್ತು ಮಾರಾಟದ ನಿಬಂಧನೆಗಳನ್ನು ಸಂಪೂರ್ಣವಾಗಿ ನಿರ್ವಹಿಸಿದ್ದ ಪಕ್ಷದಲ್ಲಿ ಹಾಗೂ ಅವರಿಗೆ ನೀಡಿದ್ದ ಜಮೀನನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡಿದ್ದಲ್ಲಿ ಜಮೀನಿನ ಪೂರ್ಣ ಹಕ್ಕನ್ನು ಮಂಜೂರುದಾರರಿಗೆ ವರ್ಗಾಯಿಸಲಾಗುವುದು.

ಶ್ರೀ ಬಸವರಾಜ್.—ಸ್ವಾಮಿ, ಈ ಜಾಗವು ಬ್ರಹ್ಮಾವರ ಟೌನ್ ಮುನಿಸಿಪಾಲಿಟಿಗೆ ಒಳಪಟ್ಟ ಜಾಗ. ೧೯೬೭ ರಲ್ಲಿ ಈ ಮುನಿಸಿಪಾಲಿಟಿಯವರು ಒಂದು ರೆಸಲ್ಯೂಷನ್ ಮಾಡಿ ಈ ೪೭ ಎಕರೆ ಜಾಗವನ್ನು ಸಹಕಾರಿ ಸಕ್ಕರೆ ಕಾರ್ಖಾನೆಗೆ ಕೊಡಬೇಕೆಂದು ತೀರ್ಮಾನಿಸಿ ಕೆ.ಐ.ಎ.ಡಿ.ಬಿ ಯವರಿಗೆ ಬಿಟ್ಟು ಕೊಟ್ಟಿದ್ದಾರೆ. ಇನ್ನುಳಿದ ೪೦ ಎಕರೆ ಜಮೀನನ್ನು ಯಾರೋ ಒಬ್ಬ ಫಿಲಿಪ್ಸ್ ಲೂಯಿಸ್ ಎನ್ನುವ ವ್ಯಕ್ತಿಗೆ ಸ್ಟಿಫ್ ಜ್ಯಾಕ್ ಮಿಷಿನ ಸಂಸ್ಕರಣ ಘಟಕವನ್ನು ಸ್ಥಾಪಿಸಲು ಮಂಜೂರು ಮಾಡಿದ್ದಾರೆ. ಇದನ್ನು ಎಕರೆ ಒಂದಕ್ಕೆ ೭೫೦೦.೦೦ ರೂಪಾಯಿಗಳ ಪ್ರಕಾರ ಕೊಡಲಾಗಿದೆ. ಇದು ನಿಜವಾಗಿಯೂ ಅನ್ಯಾಯ. ಏಕೆಂದರೆ, ಇದೇ ಜಾಗಕ್ಕೆ ಅಲ್ಲಿ ಎಕರೆಯೊಂದಕ್ಕೆ ೨೫–೩೦ ಸಾವಿರ ರೂಪಾಯಿ ಬೆಲೆ ಇದೆ. ಅಷ್ಟಿದ್ದರೂ ಇಷ್ಟೊಂದು ಕಡಿಮೆ ಬೆಲೆಗೆ ಇವರಿಗೆ ಕೊಟ್ಟಿರುವುದು ಒಂದು ರೀತಿಯ ಅಧಿಕಾರ ದುರುಪಯೋಗ ಆಗುವುದಿಲ್ಲವೆ? ಈ ವ್ಯಕ್ತಿ ಪುಂಡೆ ಎಂದಾದರೂ ಒಂದು ದಿವಸ ಇದೇ ಜಮೀನನ್ನು ಮಾರಾಟ ಮಾಡಿದರೆ ಲಕ್ಷಾಂತರ ರೂಪಾಯಿ ಆದಾಯ ಬರುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಚೆನ್ನಾಗಿ ಯೋಚನೆ ಮಾಡಬೇಕು. ಈಗ ಅಲ್ಲಿ ಒಂದು ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್‌ನ್ನು ಕಟ್ಟಿಸಬೇಕೆಂದು ಇರಾದೆ ಇರುವುದರಿಂದ ಸದರೀ ಜಾಗವನ್ನು ಶ್ರೀ ಲೂಯಿಸ್‌ರವರಿಗೆ ಕೊಡದೆ ಸರ್ಕಾರವೇ ಉಳಿಸಿಕೊಳ್ಳಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ಕೆ.ಐ.ಎ.ಡಿ.ಬಿ ಸಂಸ್ಥೆ ರಾಜ್ಯದಲ್ಲಿ ರೈತಕ್ಕ ಕೈಗಾರಿಗಳಿಗೆ ಭೂಮಿಯನ್ನು ಕೊಡತಕ್ಕಂತಹ ನೀತಿಯನ್ನು ಇಟ್ಟುಕೊಂಡಿದೆ. ಕೆ.ಐ.ಎ.ಡಿ.ಬಿ. ಇದನ್ನು ಪರಿಶೀಲನೆ ಮಾಡಿ ಈ ಕೈಗಾರಿಕೆಗಳಿಗೆ ಎಷ್ಟು ಭೂಮಿ ಅವಶ್ಯಕವಾಗಿದಿಯೋ, ಅದನ್ನು ಗಣನೆಗೆ ತೆಗೆದುಕೊಂಡು ರಿಯಾಯಿತಿ ದರದಲ್ಲಿ ಕೊಟ್ಟಿದೆ. ಒಂದು ವೇಳೆ ಕೈಗಾರಿಕೆಗಳನ್ನು ಮಾಡದೆ ಹೋದರೆ ಪುನಃ ಸರ್ಕಾರ ಈ ಜಮೀನನ್ನು ವಾಪಸ್ ತೆಗೆದುಕೊಳ್ಳುತ್ತದೆ.

ಶ್ರೀ ಬಸವರಾಜ್.—ತಾ. ೬–೪–೭೬ ರಂದು ಉಳಿದ ೯೯ ಭಾಗವನ್ನು ಒಂದೇ ತಿಂಗಳಲ್ಲಿ ಕೊಟ್ಟಿದ್ದೀರಿ. ಇನ್ನೂ ಒಂದು ಪರ್ಸೆಂಟ್ ಕೊಡುತ್ತೀರೋ ಬಿಡುತ್ತೀರೋ ಗೊತ್ತಿಲ್ಲ. ೯೯ ಪರ್ಸೆಂಟ್ ಆಯಿತು. ಇನ್ನು ಒಂದು ಪರ್ಸೆಂಟ್ ಯಾರು ಕೊಡುತ್ತಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—೯೦ ಪರ್ಸೆಂಟ್ ಆಯಿತು. ಉಳಿದ ೧೦ ಪರ್ಸೆಂಟ್ ಕೊಡಬೇಕು. ಇದರಲ್ಲಿ ಸ್ವಲ್ಪ ತಡವಾಗಿರಬೇಕು ಅಷ್ಟೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಹರಿಜನ/ಗಿರಿಜನ ಹಾಗೂ ಜನತಾ ಕಾಲೋನಿಗಳಿಗೆ ವಿದ್ಯುದ್ದೀಕರಣ.

೨೨೩. ಶ್ರೀ ಜಿ. ರಾಜಗೌಡ (ಹಾನೂರು).—ಮಾನ್ಯ ವಿದ್ಯುತ್, ಗಣಿ ಮತ್ತು ಭೂಗರ್ಭ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇರುವ ಹರಿಜನ, ಗಿರಿಜನ ಹಾಗೂ ಜನತಾ ಕಾಲೋನಿಗಳು ಎಷ್ಟು (ವಿವರ ಕೊಡುವುದು) ;

ಆ) ಇವುಗಳಲ್ಲಿ ಯಾವ ಯಾವ ಕಾಲೋನಿಗಳನ್ನು ವಿದ್ಯುದ್ದೀಕರಣಗೊಳಿಸಬೇಕಾಗಿದೆ ;

೩) ೧೯೮೫-೮೬ ರಲ್ಲಿ ಎಷ್ಟು ಗಿರಿಜನರ ಕಾಲೋನಿಗಳು ಹಾಗೂ ಹರಿಜನ ಬಸ್ತಿಗಳಿಗೆ ಹಾಗೂ ಜನತಾ ಕಾಲೋನಿಗಳಿಗೆ ವಿದ್ಯುದ್ದೀಪಗಳನ್ನು ಒದಗಿಸುವ ಗುರಿ ಇದೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂಗರ್ಭ ಮಂತ್ರಿಗಳು).—

ಅ) ಹರಿಜನ ಕಾಲೋನಿಗಳು ... ೮೬
ಗಿರಿಜನ ಕಾಲೋನಿಗಳು ... ೬೦
ಜನತಾ ಕಾಲೋನಿಗಳು ... ಮಾಹಿತಿ ಇಲ್ಲ.

ಆ) ಹರಿಜನ ಕಾಲೋನಿಗಳು ... ೧೬
ಗಿರಿಜನ ಕಾಲೋನಿಗಳು ... ೩೪
ಜನತಾ ಕಾಲೋನಿಗಳು ... ಮಾಹಿತಿ ಇಲ್ಲ.
} ವಿದ್ಯುದ್ದೀಕರಣಗೊಳಿಸಬೇಕಾಗಿರುವ ಕಾಲೋನಿಗಳ ವಿವರಗಳನ್ನು ಅನುಬಂಧ 'ಅ' ಮತ್ತು 'ಆ' ಗಳಲ್ಲಿ ಕೊಟ್ಟಿದೆ.

ಇ) ಹರಿಜನ ಬಸ್ತಿಗಳು ... ಈ ವರ್ಷ ಇಲ್ಲ,
ಗಿರಿಜನ ಕಾಲೋನಿ ... ೪
ಜನತಾ ಕಾಲೋನಿ ... ಮಾಹಿತಿ ಇಲ್ಲ.

ಅನುಬಂಧ 'ಅ'

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಇನ್ನೂ ವಿದ್ಯುದ್ದೀಕರಣವಾಗಬೇಕಾಗಿರುವ ಗಿರಿಜನ ಕಾಲೋನಿಗಳು.

೧)	ಮಂದಾರೆ	೧೮)	ಮಾವತ್ತೂರುಪೋಡು
೨)	ಮದಗಾನೆ	೧೯)	ಹೊಸದೊಡ್ಡಿ
೩)	ತುಳಸಿಕೆರೆ	೨೦)	ದೊರೆದೊಡ್ಡಿ
೪)	ತೆಕ್ಕನೆ	೨೧)	ಬಸವಾಪುರದೊಡ್ಡಿ
೫)	ಪಡಸಲನಾಥ	೨೨)	ಕುರುವಳ್ಳಿದೊಡ್ಡಿ
೬)	ಮಾರೂರೂ	೨೩)	ಅರಕೆರೆ
೭)	ಅಸ್ತೂರಂ	೨೪)	ಒಣಮೇಟಿ
೮)	ಬೆಜ್ಜಲಾಲೆ	೨೫)	ಅತ್ತಿಕಾನೆ
೯)	ಪಂಡಲಾಲೆ	೨೬)	ಅರ್ಧನಾರಿಪುರ
೧೦)	ಬುರಂಡೆ	೨೭)	ಆಲಹಳ್ಳಿ
೧೧)	ಕೊಂಬೆಡಿಕ್ಕಿ	೨೮)	ಶಂಕರಪುರದೊಡ್ಡಿ
೧೨)	ಸಾಹೇಬರ ದೊಡ್ಡಿ	೨೯)	ದೊಡ್ಡಾನೆ
೧೩)	ಎಣ್ಣೆಗುಬ್ಬನದೊಡ್ಡಿ	೩೦)	ಕೊಕರೇ
೧೪)	ಹುಣಸೇಪಾಳ್ಯ	೩೧)	ಗಾಣಿಗಮಂಗಲ
೧೫)	ಕಾರಲಕಟ್ಟೆದೊಡ್ಡಿ	೩೨)	ಗುಂಡಿಮೂಲ
೧೬)	ಚನ್ನಕಟ್ಟೆಪೋಡು	೩೩)	ಹೂವಿನಮೂಲೆ
೧೭)	ಕಾರುಬರದೊಡ್ಡಿ	೩೪)	ಕಕ್ಕೆಬೆಲೆ

ಅನುಬಂಧ 'ಆ'

ಕೊಳ್ಳೇಗಾಲ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾಗಬೇಕಾಗಿರುವ ಪರಿಜನ

ಬಸ್ತಿಗಳು (೩೧-೧೨-೧೯೮೫ ರಂತೆ)

೧) ಮಾವಂದೊಡ್ಡಿ
೨) ಜೆನ್ನೂರು
೩) ಗೊಲ್ಲನ ಬಯಲು
೪) ಹೊಸ ಬೆಡಕಿ
೫) ಅರ್ಧನಾರಿಪುರ
೬) ಹಾವಿನಮಾಳ
೭) ನಲ್ಲಿಕಾಡೂರು
೮) ಶಿವನಕವೆ
೯) ಲಕ್ಕುಂಡಿ
೧೦) ಸಂಳೇಕೋಭ
೧೧) ಮಾಪತ್ತೂರು
೧೨) ಗುರುಮಲ್ಲಪ್ಪನದೊಡ್ಡಿ
೧೩) ವಿನಾಯಕಪುರ
೧೪) ಮಂತ್ರೂಗೌಡನದೊಡ್ಡಿ
೧೫) ಬ್ಯಾರನಾಥ
೧೬) ಸಾಕಿರುಮೇಡು

ಶ್ರೀ ಜಿ. ರಾಜುಗೌಡ.—ಜನತಾ ಕಾಲೋನಿ ಬಗ್ಗೆ ಮಾಹಿತಿ ಇಲ್ಲವೆಂದು ಹೇಳಿದ್ದೀರಿ. ಸರಿಯಾಗಿ ಪೂರ್ಣ ಮಾಹಿತಿಯನ್ನು ಮತ್ತು ಅಂಕಿ ಅಂಶಗಳನ್ನು ಕೊಡುತ್ತೀರಾ ?

ಶ್ರೀ ಜೆ. ಎಸ್. ದೇಶ್‌ಮುಖ್.—ಮಾಹಿತಿಗಳನ್ನು ಕಳುಹಿಸಿಕೊಡುತ್ತೇನೆ. ಇದನ್ನು ತಡೆಹಿಡಿಯಬೇಕು. ಪೂರ್ಣ ಮಾಹಿತಿ ಬಂದ ಮೇಲೆ ಇದನ್ನು ಕಳುಹಿಸಿಕೊಡುತ್ತೇನೆ. ಮುಂದಿನ ವಾರ ಮತ್ತೆ ಈ ಪ್ರಶ್ನೆಯನ್ನು ಕೇಳಲು ಅವಕಾಶ ಕೊಡಿ.

ಅಧ್ಯಕ್ಷರು.—ಆಯಿತು.

Import of power from other States.

478. Sri K. H. Srinivas (Sivamoga).—Will the minister for Power, Mines & Geology be please to state.

a What is the present quantum of power shortage in the State;

b) What is the quantum of power imported from neighbouring States to overcome the shortage of power. (Furnish details).

c) What is the State's share from the Central Stations of Super Thermal Station and Atomic Energy Station. (Furnish details).